<u>ಸಾಕ್ಷಿಯನ್ನು ದಿನಾಂಕಃ 23.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ ಎ ಜಿ ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಿಪಿ 1 ರ ಕ್ರಯ ಪತ್ರವನ್ನು ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿದ್ದು, ನನಗೆ ಈಗ ನಿಪಿಃ1 ರ ದಾಖಲೆ ತೋರಿಸುತ್ತಿದ್ದು ಅದರಲ್ಲಿ ಪ್ರತಿವಾದಿಯರ ಸಹಿಗಳು ಇವೆ. ಸದರಿ ಸಹಿಗಳನ್ನು ಈಗಾಗಲೇ ನಿಪಿಃ1(ಎ) ಮತ್ತು (ಬಿ) ಎಂದು ಗುರುತಿಸಲಾಗಿದೆ. ನಿಪಿಃ 1 ಕ್ಕೆ ಸಾಕ್ಷಿದಾರರಾಗಿ ನಾನು ಮತ್ತು ಸಿದ್ದರಾಜು ಕೆ ಎನ್ನುವವರು ಸಹಿ ಹಾಕಿದ್ದು ಈಗ ನಾನು ನಿಪಿಃ1 ರ ಮೇಲೆ ಇರುವ ನನ್ನ ಮತ್ತು ಸಿದ್ದರಾಜು ರವರ ಸಹಿಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಸದರಿ ಸಹಿಗಳನ್ನು ಈಗಾಗಲೇ ನಿಪಿಃ1(ಸಿ) ಮತ್ತು 1(ಡಿ ) ಎಂದು ಗುರುತಿಸಲಾಗಿದೆ. ನಿಪಿಃ1 ರ ಪತ್ರ ಬರಹಗಾರರಾಗಿ ಬಾಲಕೃಷ್ಣ ಎ ರವರು ಸಹಿ ಮಾಡಿದ್ದು ಸದರಿ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸದರಿ ಸಹಿಯನ್ನು ಈಗಾಗಲೇ ನಿಡಿಃ1 (ಇ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಪಿ ಎನ್ ಕೆ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.